ಮೂವತ್ತು ಮಿಲಿಯನ್ ಪದವೀಧರರು ತಯಾರಾಗುತ್ತಿರುವ ಒಂದು ದೇಶದಿಂದ ಎಲ್ಲೋ ಕೆಲವರು ವ್ಯಾಸಂಗ ಹಾಗೂ ಉದ್ಯೋಗಕ್ಕಾಗಿ ವಿದೇಶಕ್ಕೆ ಹೋದರೆ ಅದನ್ನು ನಾನು ಪ್ರತಿಭಾ ಪಲಾಯನವೆಂದು ಪರಿಗಣಿಸಲಾರೆ. ಇಂತಹ ವಲಸೆಯು ವ್ಯಕ್ತಿ ಹಾಗೂ ಅವನ ಮನೆಯವರ ಮಧ್ಯೆ ಹಾಗೂ ಸಂಸ್ಥೆಗಳ ನಡುವೆ ಸಂಪರ್ಕವನ್ನು ಕಲ್ಪಿಸುತ್ತದೆ. ತನ್ಮೂಲಕ ನಮ್ಮ ಜ್ಞಾನದ ಸಂಪತ್ತು ಹೆಚ್ಚುತ್ತದೆ.

? ಭಾರತವು ಜಗತ್ತಿನ ಅತ್ಯುತ್ತಮ ರಾಷ್ಟ್ರವಾಗುವುದು ಯಾವಾಗ?

☆ ೨೦೨೦ಕ್ಕಿಂತಲೂ ಬಹಳ ಮೊದಲೇ. ಎಂದು ನೀವೆಲ್ಲ 'ನಾವು ಸಾಧಿಸಬಲ್ಲೆವು' ಎಂಬ ವಿಶ್ವಾಸ ತಾಳುತ್ತೀರೋ ಅಂದೇ ಭಾರತ ಉತ್ತಮವಾಗಬಲ್ಲದು.

? ಸ್ವಾಮಿ ವಿವೇಕಾನಂದರ ವಿಚಾರಗಳಿಂದ ನೀವು ಯಾವಾಗ ಮತ್ತು ಹೇಗೆ ಪ್ರಭಾವಿತರಾದಿರಿ? ಇಂದಿನ ವೈಜ್ಞಾನಿಕ ಯುಗಕ್ಕೆ ಅವರ ಸಂದೇಶ ಸುಸಂಗತವೇ?

☆ ನಾನು ಸ್ವಾಮಿ ವಿವೇಕಾನಂದರ ಹಾಗೂ ಜೆ.ಎನ್. ಟಾಟಾರ ನಡುವೆ ನಡೆದ ಸಂಭಾಷಣೆಯ ವರದಿಯನ್ನು ಓದಿದಾಗ.

? ನಮ್ಮ ಈ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರದ ತುದಿಯ ಅಂಶವನ್ನು ಮಾತ್ರ 'ದುರ್ಯೋಧನ ಕಾರ್ಯಾಚರಣೆ' ಹಾಗೂ 'ಚಕ್ರವ್ಯೂಹ ಕಾರ್ಯಾಚರಣೆ' ತೋರಿಸಿ ಕೊಟ್ಟಿವೆ. ಈ ದೇಶದ ರಾಷ್ಟ್ರಪತಿಗಳಾದ ತಾವು, ಗೌರವಾನ್ವಿತರು, ಯಾವ ರೀತಿಯಲ್ಲಿ ಇದನ್ನು ನೋಡುತ್ತೀರಿ? ನಿಮ್ಮ ದೃಷ್ಟಿಯಲ್ಲಿ ಇದಕ್ಕೆ ಪರಿಹಾರವೆಲ್ಲಿದೆ?

☆ ಸಂಸತ್ತು ಈಗಾಗಲೇ ಕಾನೂನು ರೀತ್ಯಾ ಕ್ರಮ ಕೈಗೊಂಡಿದೆ. ಇದೊಂದು ಪ್ರತಿಬಂಧಕ ಕ್ರಮ (deterrent). ಸರಿಯಾದ ಮುಖಂಡ ರನ್ನು ಚುನಾಯಿಸುವ ಜವಾಬ್ದಾರಿ ನಮ್ಮ ಮೇಲೆ ಇದೆ ಎಂಬುದು ಮುಖ್ಯ.

## ಪ್ರಹಸನ ಪ್ರಸಂಗ

**ಭಾರತದ** ನಕ್ಷೆಯನ್ನು ಕೊಂಡುಕೊಳ್ಳಲು ವಿದ್ಯಾರ್ಥಿಯೊಬ್ಬ ಅಂಗಡಿಗೆ ಹೋದ. ಅಂಗಡಿಯವನ ಬಳಿ ಭಾರತದ ನಕ್ಷೆಯಿರಲಿಲ್ಲ. ದಿಲ್ಲಿ, ಚೆನ್ನೈ, ಮುಂಬೈ, ಕೊಲ್ಕತಾ, ಬೆಂಗಳೂರುಗಳ ನಕ್ಷೆಗಳನ್ನು ತೋರಿಸುತ್ತ ಅವುಗಳ ಉತ್ಕೃಷ್ಟತೆಯ ಬಗ್ಗೆ ವಿವರಿಸತೊಡಗಿದ. ವಿದ್ಯಾರ್ಥಿ ಹೇಳಿದ, "ಅದೆಲ್ಲ ಸರಿ, ನನಗೆ ಇಡೀ ಭಾರತದ ನಕ್ಷೆ ಬೇಕ್ರೀ." ಅಂಗಡಿಯವ ಹೇಳಿದ, "ಏನಯ್ಯಾ! ನಿನಗೆ ಇಷ್ಟೇನಾ ಗೊತ್ತಿರೋದು? ನಮ್ಮ ದೇಶ ಒಂದೇ ಒಂದು ಹಾಳೆಯಲ್ಲಿ ತೋರಿಸುವಷ್ಟು ಚಿಕ್ಕದೇನಯ್ಯ? ನಿನಗೆ ಯಾರಯ್ಯಾ ಭೂಗೋಳ ಹೇಳಿಕೊಟ್ಟಿದ್ದು!...."

✪✪✪

**ನಾಲ್ಕು** ವರ್ಷದ ಬಾಲಕನೊಬ್ಬ ರಸ್ತೆಯ ಬದಿಯ ಫುಟ್‌ಪಾತ್ ಮೇಲೆ ಅತ್ತಿಂದಿತ್ತ ಓಡುತ್ತಿದ್ದ. ಇದ್ದಕ್ಕಿದ್ದಂತೆ ನಿಲ್ಲುತ್ತಿದ್ದ, ತಿರುಗುತ್ತಿದ್ದ. ಇದನ್ನು ನೋಡಿದ ಒಬ್ಬ ವೃದ್ಧ ಮಹಿಳೆ ಕೇಳಿದಳು, "ನಿಮ್ಮ ಹುಡುಗ ಎಷ್ಟು ಮುದ್ದಾಗಿದ್ದಾನೆ. ಎಷ್ಟು ವಯಸ್ಸು?" ಬದಿಯಲ್ಲಿದ್ದ ತಾಯಿ ಹೇಳಿದಳು, "ನಾಲ್ಕೇ ವರ್ಷ." ಆಗ ವೃದ್ಧೆ ಹೇಳಿದಳು, "ಇನ್ನು ಹನ್ನೆರಡು ವರ್ಷಗಳಲ್ಲಿ ಇದೇ ಹುಡುಗ ತನ್ನ ವಾಹನವನ್ನು ರಸ್ತೆಗಳಲ್ಲಿ ಹೀಗೇ ಓಡಿಸುತ್ತಿರುತ್ತಾನೆ! ಏನಾಗಬೇಡ ನಮ್ಮಂತಹವರ ಕಥೆ!"

✪✪✪

**ಒಬ್ಬ** ಪ್ರಸಿದ್ಧ ವೈದ್ಯರ ಬಳಿಗೆ ರೋಗಿಯೊಬ್ಬ ಬಂದು ಹೇಳಿದ, "ಡಾಕ್ಟರ್, ಹದಿನಾಲ್ಕು ವರ್ಷಗಳ ಹಿಂದೆ ನಿಮ್ಮಲ್ಲಿಗೆ ಬಂದಿದ್ದೆ. ನೀವು ಸ್ವಲ್ಪ ಕೂಡ ಬದಲಾಗಿಲ್ಲವಲ್ಲ!" ಡಾಕ್ಟರ್ ವ್ಯಕ್ತಿಯನ್ನು ಗಮನವಿಟ್ಟು ನೋಡಿ ಗುರುತಿಸಲು ಪ್ರಯತ್ನಿಸಿದರು. ನೆನಪಾಗಲಿಲ್ಲ. ತಾವು ಹದಿನಾಲ್ಕು ವರ್ಷಗಳಾಗಿದ್ದರೂ ವಯಸ್ಸು ತಿಳಿಯುತ್ತಿಲ್ಲ ಎಂಬ ಪ್ರಶಂಸೆಯಿಂದ ಉಬ್ಬಿಹೋದರು ಡಾಕ್ಟರ್. ತಮ್ಮ ಬೊಜ್ಜನ್ನು ಒಳಗೆ ಎಳೆದುಕೊಂಡು ಸಂತೋಷದಿಂದ ಎದೆಯುಬ್ಬಿಸಿ ಹೇಳಿದರು, "ಹೌದೆ, ಬಹಳ ಸಂತೋಷವಾಯಿತು." ರೋಗಿ ಹೇಳಿದ, "ಸತ್ಯವನ್ನೇ ಹೇಳುತ್ತಿದ್ದೇನೆ. ಹೋದ ಬಾರಿಯೂ ನಿಮ್ಮನ್ನು ನೋಡಲು ಎರಡು ತಾಸು ಕಾಯಬೇಕಾಯಿತು. ಈ ಬಾರಿಯೂ ಸರಿಯಾಗಿ ಎರಡು ತಾಸು ಕಾದು ಬೇಸತ್ತೆ!"

✪✪✪

**ಆಸ್ಪತ್ರೆಯಲ್ಲಿ** ಯುವಕ ಹಾಸಿಗೆಯ ಮೇಲೆ ಮಲಗಿದ್ದ. ಅವನ ಮಾನಸಿಕ ಸ್ವಸ್ಥತೆಯನ್ನು ಪರಿಶೀಲಿಸಲು ತಜ್ಞರು ಬಂದರು. ಬಳಿಯಲ್ಲಿಯೇ ರೋಗಿಯ ತಾಯಿ ಹೊಲಿಯುವ ಕೆಲಸದಲ್ಲಿ ತಲ್ಲೀನಳಾಗಿ ಕುಳಿತಿದ್ದಳು. ತಜ್ಞರು ತಮ್ಮ ಪರಿಚಯವನ್ನು ಮಾಡಿಕೊಂಡರು. ಯುವಕ ನೇರವಾಗಿ ಅವರನ್ನೇ ನೋಡುತ್ತ, "ನನಗೆ ಕಾಣಿಸುತ್ತಿಲ್ಲ, ಏನೂ ಕಾಣಿಸುತ್ತಿಲ್ಲ" ಎಂದು ಜೋರಾಗಿ ಕೂಗಲು ಆರಂಭಿಸಿದ. ಇಂತಹ ಒಂದು ವಿಲಕ್ಷಣವಾದ ಕುರುಡುತನದ ಹಿಸ್ಟೀರಿಯಾ ಕೇಸನ್ನು ಅವರೆಂದೂ ಕಂಡಿರಲಿಲ್ಲ. "ಎಷ್ಟು ಸಮಯದಿಂದ ಹೀಗೆ ಆಡುತ್ತಿದ್ದಾನೆ?" ಎಂದು ತಾಯಿಯನ್ನು ಪ್ರಶ್ನಿಸಿದರು. ತಲೆಯನ್ನೂ ಎತ್ತದೆ ಆಕೆ ಉತ್ತರಿಸಿದಳು, "ಅವನು ನೋಡುತ್ತಿದ್ದ ಟಿ.ವಿ.ಯ ಮುಂದೆ ನೀವು ನಿಂತಾಗಿನಿಂದ."

✪✪✪

**ಒಂದು** ಖಾಸಗಿ ವಿಮಾನದಲ್ಲಿ ಪ್ರಯಾಣಿಕರು ಅಧಿಕವಾಗಿ ತುಂಬಿದ್ದರು. ಒಬ್ಬ ಅಧಿಕಾರಿ ವಿಮಾನದೊಳಗೆ ಬಂದು ಹೇಳಿದ, "ಯಾರಾದರು ಇಬ್ಬರು ಪ್ರಯಾಣಿಕರು ಇಳಿದರೆ ಅವರಿಗೆ ಉಚಿತ ವಸತಿಯ ವ್ಯವಸ್ಥೆಯನ್ನು ಬಳಿಯಲ್ಲಿಯೇ ಇರುವ ಹೋಟೆಲ್‌ನಲ್ಲಿ ಮಾಡುವೆವು. ಉಚಿತ ಊಟದ ವ್ಯವಸ್ಥೆಯೊಂದಿಗೆ ಮರುದಿನದ ಬೆಳಗಿನ ವಿಮಾನದಲ್ಲಿ ಪ್ರಯಾಣದ ವ್ಯವಸ್ಥೆಯನ್ನೂ ಮಾಡಲಾಗುವುದು." ಯಾರೂ ಮುಂದೆ ಬರದಿದ್ದಾಗ ಬಳಿಯಲ್ಲಿಯೇ ಇದ್ದ ಪೈಲೆಟ್ ತಮಾಷೆಗಾಗಿ ಹೇಳಿದ, "ಮಹಿಳೆಯರೆ ಮತ್ತು ಮಹನೀಯರೆ, ತೀರ್ಮಾನ ತೆಗೆದುಕೊಳ್ಳಲು ನಿಮಗೆ ಅನುಕೂಲವಾಗಬಹುದಾದ ಮತ್ತೊಂದು ಸಂಗತಿ ಎಂದರೆ ನಾನು ಉತ್ತಮ ಪೈಲೆಟ್ ಅಲ್ಲ." ಹಿಂದಿನಿಂದ ಒಂದು ಧ್ವನಿ ಕೇಳಿಬಂತು, "ನೀನೇ ಇಳಿದು ಹೋಗು, ಹಾಗಿದ್ದರೆ."